## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 368

ಸದಸ್ಯರ ಹೆಸರು : ಶ್ರೀ ಡಿ.ಎಸ್. ಅರುಣ್

(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 19.08.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರಿನ ಅಂದ್ರಹಳ್ಳಿ ಮುಖ್ಯ ರಸ್ತೆಯ ತಿಗಳರಪಾಳ್ಯ ಬಸ್ ನಿಲ್ದಾಣದಿಂದ 243ಡಿ, 243ಬಿ ಬಸ್ಸುಗಳು ಮಾರ್ಕೆಟ್, ಕೆಂಪೇಗೌಡ ಬಸ್ ನಿಲ್ದಾಣ ಹಾಗೂ ಪೀಣ್ಯ 2ನೇ ಹಂತದಿಂದ ಮಾರ್ಕೆಟ್/ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಹಾಗೂ ತುಂಗಾನಗರದ ಮೂಲಕ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಕ್ರಮವಾಗಿ ಬೆಳಗ್ಗೆ 9.00 ಗಂಟೆಯಿಂದ 9.30 ರವರೆಗೆ 5-10 ನಿಮಿಷಗಳ ಅಂತರದಲ್ಲಿ ಸುಮಾರು 4 ಬಸ್ಸುಗಳು ಹೊರಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪ್ರಸ್ತುತ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವ್ಯಾಪ್ತಿಯ ತಿಗಳರಪಾಳ್ಯದಿಂದ ನಗರದ ವಿವಿಧ ಪ್ರಮುಖ ಸ್ಥಳಗಳಿಗೆ ಮಾರ್ಗ ಸಂಖ್ಯೆ:243B, 243-C, 243-D, 252-FC, 252-FB, 265-B ಗಳಲ್ಲಿ ಒಟ್ಟು 06 ಬಸ್ಸುಗಳಿಂದ 64 ಟ್ರಿಪ್‌ಗಳನ್ನು ಹಾಗೂ ತಿಗಳರಪಾಳ್ಯ ಮಾರ್ಗವಾಗಿ ಮಾರ್ಗ ಸಂಖ್ಯೆ:515B, BC-7B, BC-7H, BC-8, MF-30, MF-31, Chakra-7 & Chakra-7A ಗಳಲ್ಲಿ ಒಟ್ಟು 48 ಬಸ್ಸುಗಳಿಂದ 627 ಟ್ರಿಪ್‌ಗಳನ್ನು ಆಚರಣೆಗೊಳಿಸಲಾಗುತ್ತಿದೆ. ಮಾರ್ಗವಾರು ವಿವರವನ್ನು "ಅನುಬಂಧ"ದಲ್ಲಿ ಒದಗಿಸಲಾಗಿದೆ.<br><br>ತಿಗಳರಪಾಳ್ಯ ಬಸ್ ನಿಲ್ದಾಣದಿಂದ ಮಾಗಡಿ ರಸ್ತೆ ಮಾರ್ಗವಾಗಿ ಕೃ.ರಾ.ಮಾರುಕಟ್ಟೆ ಹಾಗೂ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಬೆಳಿಗ್ಗೆ 07:50, 08:10, 09:00, 09:20, 11:00 ಗಂಟೆಗೆ ಹಾಗೂ ತಿಗಳರಪಾಳ್ಯ ಬಸ್ ನಿಲ್ದಾಣದಿಂದ ಪೀಣ್ಯ 2ನೇ ಹಂತ ಮಾರ್ಗವಾಗಿ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಬೆಳಿಗ್ಗೆ 07:50, 09:20, 10:00 ಗಂಟೆಗೆ ಪ್ರಯಾಣಿಕರ ಬೇಡಿಕೆ/ದಟ್ಟಣೆಗನು ಗುಣವಾಗಿ ಟ್ರಿಪ್‌ಗಳನ್ನು ಆಚರಣೆ ಗೊಳಿಸಲಾಗುತ್ತಿದೆ. |
| ಆ | ತಿಗಳರಪಾಳ್ಯದ ಬಸ್ ನಿಲ್ದಾಣದಿಂದ ಈಗ 2-3 ತಿಂಗಳಿಂದ ಒಂದು ಬಸ್ ಬಾರದೇ/ ಹೊರಡದೇ ಇರುವುದರಿಂದ ಮಾರ್ಕೆಟ್, ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಹಾಗೂ ಮುಂದೆ ಎಂ.ಎಸ್.ಬಿಲ್ಡಿಂಗ್, ವಿಧಾನ ಸೌಧ, ಶಿವಾಜಿನಗರ ಇತರೆ ಭಾಗದ ಕಛೇರಿಗಳಿಗೆ ಹೋಗುವ ಸಿಬ್ಬಂದಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ | 2-3 ತಿಂಗಳಿಂದ ತಿಗಳರಪಾಳ್ಯದಿಂದ ಆಚರಣೆಯಲ್ಲಿರುವ ಯಾವುದೇ ಮಾರ್ಗಗಳನ್ನು ರದ್ದುಪಡಿಸಿರುವುದಿಲ್ಲ.<br><br>ಪ್ರಸ್ತುತ ತಿಗಳರಪಾಳ್ಯ ಬಸ್ ನಿಲ್ದಾಣದಿಂದ ಕೆಂಪೇಗೌಡ ಬಸ್ ನಿಲ್ದಾಣಕ್ಕೆ 18 ಟ್ರಿಪ್‌ಗಳನ್ನು ಹಾಗೂ ಕೃಷ್ಣರಾಜ ಮಾರುಕಟ್ಟೆಗೆ 8 ಟ್ರಿಪ್‌ಗಳನ್ನು ಆಚರಣೆಗೊಳಿಸುತ್ತಿದ್ದು, ಎಂ.ಎಸ್.ಬಿಲ್ಡಿಂಗ್, ವಿಧಾನ |

| | | |
|---|---|---|
| | ಬಂದಿದೆಯೇ: ಬಂದಿದ್ದಲ್ಲಿ, ತೆಗೆದುಕೊಂಡ ಕ್ರಮವೇನು; (ವಿವರ ನೀಡುವುದು) | ಸೌಧ, ಶಿವಾಜಿನಗರ ಇತರ ಸ್ಥಳಗಳಿಗೆ ಹೋಗುವ ಪ್ರಯಾಣಿಕರು ಒಂದು ಕಡೆ ಬಸ್ಸನ್ನು ಬದಲಾಯಿಸಿ ಹೋಗಲು ಇತರೆ ಮಾರ್ಗಗಳ ಲಭ್ಯತೆ ಇರುತ್ತದೆ. |
| ಇ | ತಿಗಳರಪಾಳ್ಯದಿಂದ ಬೆಳಗ್ಗೆ 9.00 ಗಂಟೆಗೆ ವಿಧಾನ ಸೌಧಕ್ಕೆ ಮತ್ತು ವಿಧಾನ ಸೌಧದಿಂದ ಸಂಜೆ 5.35ಕ್ಕೆ ಬಸ್ ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಪ್ರಸ್ತುತ ಲಿಂಗಧೀರನಹಳ್ಳಿಯಿಂದ ಅಂದ್ರಹಳ್ಳಿ ಮುಖ್ಯ ರಸ್ತೆ, ವಿಧಾನಸೌಧ ಮಾರ್ಗವಾಗಿ ಶಿವಾಜಿನಗರಕ್ಕೆ ಬೆಳಿಗ್ಗೆ 08:50 ಗಂಟೆಗೆ ಹಾಗೂ ಸಂಜೆ 17:30ಕ್ಕೆ ಶಿವಾಜಿನಗರದಿಂದ ವಿಧಾನಸೌಧ, ಅಂದ್ರಹಳ್ಳಿ ಮುಖ್ಯ ರಸ್ತೆ ಮಾರ್ಗವಾಗಿ ಲಿಂಗಧೀರನಹಳ್ಳಿಗೆ ಸಾರಿಗೆ ಸೇವೆ ಲಭ್ಯವಿದ್ದು, ತಿಗಳರಪಾಳ್ಯದ ಪ್ರಯಾಣಿಕರು ಹೆರೋಹಳ್ಳಿಯಲ್ಲಿ ಒಂದು ಕಡೆ ಬಸ್ ಬದಲಾಯಿಸಿ ಪ್ರಯಾಣಿಸಬಹುದಾಗಿದೆ. |
| ಈ | ತಿಗಳರಪಾಳ್ಯ ಬಸ್ ನಿಲ್ದಾಣದಲ್ಲಿ ಪ್ರತಿ ನಿತ್ಯ ಹಲವಾರು ಖಾಸಗಿ ವಾಹನಗಳಾದ ಟೆಂಪೋ, ಕಾರು, ನೀರಿನ ಟ್ಯಾಂಕ್, ಸ್ಕೂಟರ್, ಬೈಕ್‌ಗಳ ಮಾಲೀಕರುಗಳು ಬಸ್ ನಿಲ್ದಾಣವನ್ನೆ ತಂಗುದಾಣವನ್ನಾಗಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ತಿಗಳರಪಾಳ್ಯದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದಿಂದ ಬಸ್ ತಂಗುದಾಣವನ್ನು ನಿರ್ಮಾಣ ಮಾಡಿದ್ದು, ಗ್ರೇಟರ್ ಬೆಂಗಳೂರು ಪ್ರಾಧಿಕಾರದಿಂದಲೇ ನಿರ್ವಹಣೆ ಮಾಡಲಾಗುತ್ತಿದೆ.<br><br>ಆದಾಗ್ಯೂ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ ಸದರಿ ಬಸ್ ನಿಲುಗಡೆಯಲ್ಲಿನ ವಾಹನಗಳ ಅನಧಿಕೃತ ಪಾರ್ಕಿಂಗ್ ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಪೊಲೀಸ್ ಇಲಾಖೆಯನ್ನು ಕೋರಲಾಗಿದೆ. |
| ಉ | ತಿಗಳರಪಾಳ್ಯ ಬಸ್ ನಿಲ್ದಾಣವನ್ನು ಖಾಸಗಿ ವಾಹನಗಳಿಂದ ಮುಕ್ತಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ಮಾಹಿತಿ ಒದಗಿಸುವುದು) | |

ಸಂಖ್ಯೆ: ಟಿಡಿ 221 ಟಿಸಿಕ್ಯೂ 2026

(ಬಿ.ಎಸ್. ಸುರೇಶ)
ಸಾರಿಗೆ ಸಚಿವರು

**ANNEXURE-A**

| ತಿಗಳರಪಾಳ್ಯದಿಂದ ವಿವಿಧ ಸ್ಥಳಗಳಿಗೆ ಆಚರಣೆಯಲ್ಲಿರುವ ಮಾರ್ಗಗಳ ವಿವರ | | | | | |
|---|---|---|---|---|---|
| SL NO. | ROUTE NO. | FROM | TO | NO. OF SCHS | NO. OF TRIPS |
| 1 | 243B | KR Market | Thigalarapalya | 1 | 12 |
| 2 | 243C | KR Market | Thigalarapalya | 1 | 10 |
| 3 | 243D | Kempegowda Bus Station | Thigalarapalya | 1 | 14 |
| 4 | 252FB | Kempegowda Bus Station | Thigalarapalya | 1 | 2 |
| 5 | 252FC | Kempegowda Bus Station | Thigalarapalya | 1 | 12 |
| 6 | 265B | Kempegowda Bus Station | Thigalarapalya | 1 | 14 |
| | | | TOTAL | 6 | 64 |

| ತಿಗಳರಪಾಳ್ಯ ಮಾರ್ಗವಾಗಿ ಆಚರಣೆಯಲ್ಲಿರುವ ಮಾರ್ಗಗಳ ವಿವರ | | | | | |
|---|---|---|---|---|---|
| SL NO. | ROUTE NO. | FROM | TO | NO. OF SCHS | NO. OF TRIPS |
| 1 | 250M/1 | Kempegowda Bus Station | MEI Layout | 1 | 2 |
| 2 | 273C/7 | Kempegowda Bus Station | Jalahalli Cross | 1 | 2 |
| 3 | 401K/28 | Yelahanka | Kengeri TTMC | 1 | 1 |
| 4 | 515B | Jnanbharathi Metro Station | Dasarahalli 8th Mile | 8 | 80 |
| 5 | BC7B | 8th Mile Dasarahalli | Byadarahalli | 10 | 180 |
| 6 | BC7C | 8th Mile Dasarahalli | 8th Mile Dasarahalli | 1 | 13 |
| 7 | BC7CA | 8th Mile Dasarahalli | 8th Mile Dasarahalli | 1 | 6 |
| 8 | BC7E | 8th Mile Dasarahalli | Gangondanahalli | 2 | 24 |
| 9 | BC7H | 8th Mile Dasarahalli | Herohalli Cross | 7 | 126 |
| 10 | BC8 | Chikkabanawara | Sumanahalli | 6 | 62 |
| 11 | MF25A | 8th Mile Dasarahalli | Suvarananagara | 1 | 12 |
| 12 | MF30 | Jalahalli Metro Station | Jalahalli Metro Station | 2 | 15 |
| 13 | MF31 | Jalahalli Metro Station | Jalahalli Metro Station | 2 | 20 |
| 14 | MF38 | Rajarajeshwari Metro Station | Rajarajeshwari Metro Station | 1 | 4 |
| 15 | CHAKRA7 | Peenya 2nd Stage | Peenya 2nd Stage | 2 | 40 |
| 16 | CHAKRA7A | Peenya 2nd Stage | Peenya 2nd Stage | 2 | 40 |
| | | | TOTAL | 48 | 627 |

ಮುಖ್ಯ ಸಂಚಾರ ವ್ಯವಸ್ಥಾಪಕರು (ಆ)
ಬೆಂ.ಮ.ಸಾ.ಸಂಸ್ಥೆ